**ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ, ಸಾಗರ**

**ಸಿ.ಸಿ.ನಂ.2427/2025.**

**ಪಿರ್ಯಾದಿ** :- ರಾಜೇಶ ಜಿ.ಎಸ್. ಬಿನ್ ಶಶಿ,
ಸುಮಾರು 28 ವರ್ಷ,
ಬಿ.ಕೆ. ರಸ್ತೆ, ಗಾಂಧಿನಗರ, ಸಾಗರ ಟೌನ್,
ಶಿವಮೊಗ್ಗ ಜಿಲ್ಲೆ.

**-ವಿರುದ್ಧ-**

**ಆರೋಪಿ** :- ರೇಣುಕಾ ಎನ್. ಕೋಂ ನಾಗರಾಜ್ ಎಸ್.,
ಸುಮಾರು 47 ವರ್ಷ,
ಆನಂದಸುಧಾ ನಿಲಯ, ಜನ್ನತ್ ನಗರ,
ಮುಖ್ಯ ರಸ್ತೆ, ಸಾಗರ ಟೌನ್,
ಶಿವಮೊಗ್ಗ ಜಿಲ್ಲೆ.

ಭಾರತ ದಂಡ ಪಕ್ರಿಯಾ ಸಂಹಿತೆ ಕಲಂ. 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ1: ನೀವು ಈ ಕೇಸಿನಲ್ಲಿ ಪಿರ್ಯಾದುದಾರರ ಪರ ಮಾಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ:

ಪ್ರಶ್ನೆ2: ಪ್ರಾ.ಸಾ.1 ರಾಜೇಶ ಜಿ.ಎಸ್. ಇವರು ಮುಖ್ಯ ವಿಚಾರಣೆ **ಸಾಕ್ಷ್ಯದಲ್ಲಿ,** ಆರೋಪಿಯಾದ ನೀವು ನಿಮ್ಮ ಆರ್ಥಿಕ ಅಡಚಣೆಯನ್ನು ನಿವಾರಿಸುವ ಸಲುವಾಗಿ ಪಿರ್ಯಾದುದಾರರಿಂದ ರೂ.2,50,000-00 (ಎರಡು ಲಕ್ಷದ ಐವತ್ತು ಸಾವಿರ)ಗಳನ್ನು ದಿನಾಂಕ:07.01.2023 ರಂದು ಸಾಲವಾಗಿ ಆರೋಪಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:-

ಪ್ರಶ್ನೆ3: ಪ್ರಾ.ಸಾ.1 ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆ **ಸಾಕ್ಷ್ಯದಲ್ಲಿ,** ಆರೋಪಿಯಾದ ನೀವು ಸದರಿ ಸಾಲವನ್ನು ಎರಡು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರ:-

ಸಿ.ಸಿ.ಸಂ.2427/2025.

**ಪ್ರಶ್ನೆ**4ಃ **ಪ್ರಾ.ಸಾ.**1 ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆ **ಸಾಕ್ಷ್ಯದಲ್ಲಿ,** ಆರೋಪಿಯಾದ ನೀವು ಸದರಿ ಸಾಲವನ್ನು ನಿಗದಿತ ಅವಧಿಯಲ್ಲಿ ಮರುಪಾವತಿಸದೇ ಇದ್ದಾಗ ಪಿರ್ಯಾದುದಾರರು ಸಾಲವನ್ನು ಮರುಪಾವತಿಸುವಂತೆ ಪದೇ ಪದೇ ಕೇಳಿದಾಗ ದಿನಾಂಕಃ02.03.2023 ರಂದು ರೂ.2,50,000-00(ಎರಡು ಲಕ್ಷದ ಐವತ್ತು ಸಾವಿರ)ಗಳಿಗೆ ನೀವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಾಗರ ಶಾಖೆಯ ಚೆಕ್.ನಂ.745629 ರ ಮೇಲೆ ದಿನಾಂಕಃ02.03.2023 ಎಂದು ನಮೂದಿಸಿ ಸಹಿ ಮಾಡಿ ನಗದೀಕರಿಸಿಕೊಳ್ಳುವಂತೆ ಪಿರ್ಯಾದುದಾರರಿಗೆ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರಃ-

**ಪ್ರಶ್ನೆ**5ಃ **ಪ್ರಾ.ಸಾ.**1 **ಅವರು** ಮುಂದುವರೆದ ಮುಖ್ಯ ವಿಚಾರಣೆ **ಸಾಕ್ಷ್ಯದಲ್ಲಿ** ಆರೋಪಿ ನೀಡಿದ ಸದರಿ ಚೆಕ್ ನ್ನು ದಿನಾಂಕಃ02.03.2023 ರಂದು ಪಿರ್ಯಾದುದಾರರು ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಸಾಗರ ಶಾಖೆಯ ಮುಖಾಂತರ ನಗದೀಕರಿಸಿಕೊಳ್ಳಲು ಸಲ್ಲಿಸಿದಾಗ ಸದರಿ ಚೆಕ್ ಆಂಗ್ಲ ಭಾಷೆಯಲ್ಲಿ (Exceeds Arrangement) ಎಂಬ ಷರಾದೊಂದಿಗೆ ದಿನಾಂಕಃ03.03.2023 ರಂದು ಚೆಕ್ ವಾಪಸ್ಸು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. **ಇದಕ್ಕೆ ನೀವೇನು ಹೇಳುತ್ತೀರಿ?**

ಉತ್ತರಃ-

**ಪ್ರಶ್ನೆ**6ಃ **ಪ್ರಾ.ಸಾ.**1 **ರವರು ಮುಂದುವರೆದು** ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಈ ಬಗ್ಗೆ ಪಿರ್ಯಾದುದಾರರು ಆರೋಪಿಗೆ ತಮ್ಮ ವಕೀಲರಿಂದ ದಿನಾಂಕಃ06.04.2023 ರಂದು ಅಂಚೆ ನೊಂದಣಿ ಮೂಲಕ ನೋಟೀಸನ್ನು ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕಃ10.04.2023 ರಂದು ಖುದ್ದು ಆರೋಪಿಗೆ ಜಾರಿಯಾಗಿರುವುದಾಗಿ ನುಡಿದಿರುತ್ತಾರೆ. **ಇದಕ್ಕೆ ನೀವೇನು ಹೇಳುತ್ತೀರಿ?**

ಉತ್ತರಃ-

**ಪ್ರಶ್ನೆ**7ಃ **ಪ್ರಾ.ಸಾ.**1 **ರವರು ಮುಂದುವರೆದು** ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಆರೋಪಿಗೆ ನೋಟಿಸ್ ಖುದ್ದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ನಿಗದಿತ ಅವಧಿಯೊಳಗೆ ಸದರಿ ಚೆಕ್ಕಿನಲ್ಲಿ ಹೇಳಿರುವ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ, **ಇದಕ್ಕೆ ನೀವೇನು ಹೇಳುತ್ತೀರಿ?**

**ಉತ್ತರಃ**

**ಪ್ರಶ್ನೆ**8ಃ **ಪ್ರಾ.ಸಾ.**1 **ರವರು ಮುಂದುವರೆದು ಆದ್ದರಿಂದ ನೀವು ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆ ಕಲಂ** 138 **ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?**

**ಉತ್ತರಃ**

ಪ್ರಶ್ನೆ9ಃ ಪ್ರಾ.ಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಆರೋಪಿ ನೀಡಿದ ಮೂಲ ಚೆಕ್ ನ್ನು ನಿಶಾನೆ ಪಿ.1 ಎಂದು, ಅದರ ಮೇಲಿರುವ ಆರೋಪಿಯ ಸಹಿಯನ್ನು ನಿಶಾನೆ ಪಿ.1(ಎ) ಎಂದು, ಚೆಕ್ ರಿಟರ್ನ್ ಮೆಮೊ ವನ್ನು ನಿಶಾನೆ ಪಿ.2 ಎಂದು, ಕಾನೂನುಬದ್ಧ ನೋಟೀಸನ್ನು ನಿಶಾನೆ ಪಿ.3 ಎಂದು, ಅಂಚೆ ರಸೀದಿಯನ್ನು ನಿಶಾನೆ ಪಿ.4 ಎಂದು, ಟ್ರ್ಯಾಕ್ ಕನ್ಸೈನ್ಮೆಂಟ್ ಅನ್ನು ನಿಶಾನೆ ಪಿ.5 ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ 10ಃ ನಿಮ್ಮ ಪರ ಯಾರಿಗಾದರೂ ಸಾಕ್ಷಿ ಮಾಡಿಸುತ್ತೀರಾ?

ಉತ್ತರಃ

ಪ್ರಶ್ನೆ 11ಃ ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯಾ?

ಉತ್ತರಃ

(ದಿಃ23.02.2026 ರಂದು ಮೇಲ್ಕಂಡ ಹೇಳಿಕೆಯು ಆರೋಪಿಯಿಂದ ನೀಡಲ್ಪಟ್ಟಿದ್ದು ನಿಜವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಸಾಗರ.